ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**
13

ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ   ದಿನಾಂಕ : DATE :

# ಕೃಷಿ ಮಸೂದೆಗಳಿಗೆ ರಾಷ್ಟ್ರಪತಿ ಅಂಕಿತ

ವಿ.ವಾ. 28-9-2020

**ನವದೆಹಲಿ:** ದೇಶದ ಹಲವೆಡೆ ಪ್ರತಿಭಟನೆಯ ಕಿಚ್ಚು ಹೊತ್ತಿಸಿರುವ ಮೂರು ಕೃಷಿ ಮಸೂದೆಗಳಿಗೆ ರಾಷ್ಟ್ರಪತಿ ರಾಮನಾಥ ಕೋವಿಂದ ಭಾನುವಾರ ಅಂಕಿತ ಹಾಕಿದ್ದಾರೆ. ಇದರೊಂದಿಗೆ 3 ಮಸೂದೆಗಳೂ ಕಾಯ್ದೆ ರೂಪದಲ್ಲಿ ಜಾರಿಗೆ ಬಂದಿವೆ. ರೈತರ ಉತ್ಪಾದನಾ ವ್ಯಾಪಾರ ಮತ್ತು ವಾಣಿಜ್ಯ (ಪ್ರೋತ್ಸಾಹ ಮತ್ತು ನೆರವು) ಮಸೂದೆ, ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ಬೆಲೆ ಭರವಸೆ ಒಪ್ಪಂದ, ಕೃಷಿ ಸೇವೆ ಮಸೂದೆ ಮತ್ತು ಅಗತ್ಯ ಸರಕುಗಳ (ತಿದ್ದುಪಡಿ) ಮಸೂದೆಗಳಿಗೆ ಪ್ರತಿಪಕ್ಷಗಳ ಭಾರಿ ವಿರೋಧದ ನಡುವೆಯೇ ಸಂಸತ್‌ನ ಉಭಯ ಸದನಗಳಲ್ಲಿ ಇತ್ತೀಚೆಗೆ ಅನುಮೋದನೆ ಪಡೆಯಲಾಗಿತ್ತು. ಈ ಬೆಳವಣಿಗೆ ಬಳಿಕ ಮಸೂದೆಗಳಿಗೆ ಅಂಕಿತ ಹಾಕದಂತೆ ಪ್ರತಿಪಕ್ಷಗಳು ರಾಷ್ಟ್ರಪತಿಯನ್ನು ಭೇಟಿಯಾಗಿ ಮನವಿ ಮಾಡಿದ್ದವು. ವಿವರ ಪುಟ 8



## ಕಾನೂನು ಸಚಿವ ಮಾಧುಸ್ವಾಮಿ ಸುಳಿವು
# ಈ ವಾರ 4 ಸುಗ್ರೀವಾಜ್ಞೆ

**ಬೆಂಗಳೂರು:** ಭೂಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆಗೆ ವಿಧಾನಪರಿಷತ್‌ನಲ್ಲಿ ಅನುಮೋದನೆ ಸಿಗದೆ ಬಾಕಿಯಾಗಿರುವುದರಿಂದ ಮತ್ತು ಕಾರ್ಮಿಕ ತಿದ್ದುಪಡಿ ಕಾಯ್ದೆಗೆ ಪರಿಷತ್‌ನಲ್ಲಿ ಸೋಲಾಗಿರುವುದರಿಂದ ಮತ್ತೆ ಸುಗ್ರೀವಾಜ್ಞೆ ತರಲು ಶೀಘ್ರದಲ್ಲೇ ಸಂಪುಟ ಸಭೆ ಅನುಮೋದನೆ ನೀಡಲಿದೆ.



ಈ ಸಂಬಂಧ ವಿಜಯವಾಣಿಯೊಂದಿಗೆ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಮುಂದಿನ 6 ತಿಂಗಳಿಗೆ ಅನ್ವಯವಾಗುವಂತೆ ಸುಗ್ರೀವಾಜ್ಞೆ ತರಲು ರಾಜ್ಯಪಾಲರ ಅನುಮತಿ ಕೋರಲಾಗುತ್ತದೆ. ಚಳಿಗಾಲದ ಅಧಿವೇಶನ ಅಥವಾ ಜಂಟಿ ಅಧಿವೇಶನದಲ್ಲಿ ಈ ವಿಧೇಯಕಗಳಿಗೆ ಅನುಮೋದನೆ ಪಡೆಯಲಾಗುತ್ತದೆ ಎಂದರು. ಪುಟ 7

---

**ಕಾಯ್ದೆ ರೂಪ ಪಡೆದ 3 ಮಹತ್ವದ ವಿಧೇಯಕಗಳು ಪ್ರತಿಪಕ್ಷಗಳ ಮನವಿ ತಿರಸ್ಕೃತ**

# ಕೃಷಿ ಮಸೂದೆಗಳಿಗೆ ರಾಷ್ಟ್ರಪತಿ ಕೋವಿಂದ ಅಂಕಿತ

ಪ್ರ.ವಾ. 28-9-2020

**ನವದೆಹಲಿ:** ಕಳೆದ ವಾರ ಸಂಸತ್ ಅಂಗೀಕರಿಸಿದ ಮೂರು ಕೃಷಿ ಮಸೂದೆಗಳಿಗೆ ರಾಷ್ಟ್ರಪತಿ ರಾಮನಾಥ ಕೋವಿಂದ ಭಾನುವಾರ ಅಂಕಿತ ಹಾಕಿದ್ದಾರೆ. ಈ ಮೂಲಕ ರೈತರ ಉತ್ಪಾದನಾ ವ್ಯಾಪಾರ ಮತ್ತು ವಾಣಿಜ್ಯ (ಪ್ರೋತ್ಸಾಹ ಮತ್ತು ನೆರವು) ಮಸೂದೆ ಹಾಗೂ ರೈತರ (ಸಬಲೀಕರಣ ಮತ್ತು ಸಂರಕ್ಷಣೆ) ಬೆಲೆ ಭರವಸೆ ಒಪ್ಪಂದ, ಕೃಷಿ ಸೇವೆ ಮಸೂದೆ ಮತ್ತು ಅಗತ್ಯ ಸರಕುಗಳ (ತಿದ್ದುಪಡಿ) ಮಸೂದೆಗಳು ಕಾಯ್ದೆಯಾಗಿ ಜಾರಿಯಾಗಿವೆ.



ರೈತರಿಗೆ ಮಾರಕವಾಗಿರುವ ಈ ಮಸೂದೆಗಳಿಗೆ ಸಹಿ ಹಾಕದಂತೆ ರಾಷ್ಟ್ರಪತಿಗಳನ್ನು ಕೋರಿದ್ದ 12 ವಿರೋಧ ಪಕ್ಷಗಳು, ಮರುಪರಿಶೀಲನೆಗಾಗಿ ಸಂಸತ್‌ಗೆ ವಾಪಸು ಕಳುಹಿಸುವಂತೆ ಒತ್ತಾಯಿಸಿದ್ದವು. ಕೃಷಿ ಕ್ಷೇತ್ರದಲ್ಲಿ ಸುಧಾರಣೆ ತರಲು ಕಳೆದ ಜೂನ್‌ನಲ್ಲಿ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದ್ದಾಗಲೇ ಇದನ್ನು ಪ್ರತಿಪಕ್ಷಗಳು ಮತ್ತು ರೈತರು ವಿರೋಧಿಸಿದ್ದವು. ಮಸೂದೆ ಸಂಸತ್‌ನಲ್ಲಿ ಮಂಡನೆಯಾದ ಮೇಲೆ ಪಂಜಾಬ್, ಹರಿಯಾಣಗಳಲ್ಲಿ ಪ್ರತಿಭಟನೆ ತಾರಕ್ಕೇರಿತು. ಬಿಜೆಪಿ ಮಿತ್ರ ಪಕ್ಷ ಶಿರೋಮಣಿ ಅಕಾಲಿದಳದ ನಾಯಕಿ ಹರ್‌ಸಿಮ್ರತ್ ಕೌರ್ ಬಾದಲ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಸೆ. 20ರಂದು ರಾಜ್ಯಸಭೆಯಲ್ಲಿ ಈ ಮಸೂದೆಗಳನ್ನು ವಿರೋಧಿಸಿ ಪ್ರತಿಪಕ್ಷಗಳು ದೊಡ್ಡ ರಂಪಾಟ ಮಾಡಿದವು. 8 ಸದಸ್ಯರನ್ನು ಸದನದಿಂದ ಅಮಾನತು ಮಾಡಲಾಯಿತು.



## ನಿಯಮ ಉಲ್ಲಂಘನೆ?

ಕೃಷಿ ಮಸೂದೆಗಳನ್ನು ರಾಜ್ಯಸಭೆಯಲ್ಲಿ ಸೆ. 20ರಂದು ಧ್ವನಿಮತದಿಂದ ಅಂಗೀಕರಿಸಲಾಗಿದೆ. ಆದರೆ ಇದರಲ್ಲಿ ಕೆಲ ನಿಯಮ ಉಲ್ಲಂಘನೆಯಾಗಿದೆ ಎಂಬ ಆರೋಪ ಕೇಳಿಬಂದಿದೆ. ವಿರೋಧ ಪಕ್ಷಗಳು ಮತವಿಭಜನೆಗೆ ಕೋರಿದ ವೇಳೆ ಎಲ್ಲ ಸಂಸದರು ಅವರ ಆಸನದಲ್ಲಿ ಇದ್ದರು ಎಂಬುದು ಕಲಾಪದ ವಿಡಿಯೋ ದೃಶ್ಯಾವಳಿಗಳಿಂದ ತಿಳಿದುಬಂದಿದೆ. ಆದರೆ, ಮಸೂದೆ ಮೇಲಿನ ಚರ್ಚೆ ವೇಳೆಯಲ್ಲೇ ಸದನದಲ್ಲಿ ಗದ್ದಲವಾಯಿತು. ಪ್ರತಿಪಕ್ಷ ಸಂಸದರು ಪ್ರತಿಭಟನೆ ನಡೆಸಿದ್ದರು ಎಂದು ಸರ್ಕಾರ ಹೇಳಿತ್ತು. ಗದ್ದಲ ನಡುವೆಯೇ ಧ್ವನಿ ಮತಕ್ಕೆ ಹಾಕಲು ಸಭಾಧ್ಯಕ್ಷ ಪೀಠದಲ್ಲಿದ್ದ ಉಪಾಧ್ಯಕ್ಷ ಹರಿವಂಶ ಸಿಂಗ್ ಅನುಮತಿ ನೀಡಿದರು. ನಂತರ ಗದ್ದಲದ ಮಧ್ಯದಲ್ಲೇ ಧ್ವನಿಮತದಿಂದ ಅಂಗೀಕಾರವಾಗಿದೆ ಎಂದು ರೂಲಿಂಗ್ ನೀಡಿದರು.

## ಕಾಯ್ದೆಯ ಮುಖ್ಯಾಂಶ

- ರೈತರನ್ನು ಎಪಿಎಂಸಿ ಮಾರುಕಟ್ಟೆ ನಿರ್ಬಂಧದಿಂದ ಮುಕ್ತಗೊಳಿಸಿ, ಯಾವುದೇ ಮಾರುಕಟ್ಟೆಗಳಲ್ಲಿ ಉತ್ಪನ್ನ ಮಾರಾಟ ಮಾಡಲು ಅವಕಾಶ.
- ಆನ್‌ಲೈನ್ ಮೂಲಕ ರೈತರ ಉತ್ಪನ್ನಗಳ ವ್ಯವಹಾರ ನಡೆಸಲು ಒಪ್ಪಿಗೆ. ಇದಕ್ಕಾಗಿ ಪ್ರತ್ಯೇಕ ವೇದಿಕೆ ಅಸ್ತಿತ್ವಕ್ಕೆ ತರಲಾಗುತ್ತದೆ. ದೇಶದ ಯಾವುದೇ ಪ್ರದೇಶದಿಂದ ಆನ್‌ಲೈನ್ ಮೂಲಕ ಖರೀದಿ- ಮಾರಾಟ ಮಾಡಬಹುದಾಗಿದೆ.
- ವ್ಯಕ್ತಿ ಅಥವಾ ಸಂಸ್ಥೆ ಜತೆ ಬೆಳೆ ಬೆಳೆಯುವ ಮೊದಲೇ ಒಪ್ಪಂದ ಮಾಡಿಕೊಳ್ಳಲು ಅವಕಾಶ. ಇದರಿಂದ ರೈತರಿಗೆ ನಿಗದಿತ ಬೆಲೆ ಸಿಗಲಿದೆ.

## ಪ್ರತಿಪಕ್ಷಗಳಿಂದ ವಿರೋಧ ಏಕೆ?

- ಮಸೂದೆಗಳು ರೈತವಿರೋಧಿ ಎನ್ನುವುದು ಶಿರೋಮಣಿ ಅಕಾಲಿದಳ, ಪ್ರತಿಪಕ್ಷಗಳು ಹಾಗೂ ಕೆಲ ರೈತ ಸಂಘಟನೆಗಳ ಟೀಕೆ.
- ಕೃಷಿ ವಲಯದಲ್ಲಿ ಕಾರ್ಪೊರೇಟ್ ಕಂಪನಿಗಳು ಮೇಲುಗೈ ಸಾಧಿಸಲು ಈ ಮಸೂದೆಗಳು ನೆರವಾಗುತ್ತವೆ.
- ಸರ್ಕಾರ ರೈತರಿಗೆ ನೀಡುತ್ತಿರುವ ಕನಿಷ್ಠ ಬೆಂಬಲಬೆಲೆಯನ್ನು ಹಂತ ಹಂತವಾಗಿ ಸ್ಥಗಿತಗೊಳಿಸುವ ಹುನ್ನಾರ
- ಕಾರ್ಪೊರೇಟ್ ಕಂಪನಿಗಳು ಬೆಲೆ ನಿಗದಿ ಮಾಡುವ ಸಾಧ್ಯತೆ ಇರುವ ಕಾರಣ, ರೈತರಿಗೆ ಅನ್ಯಾಯವಾಗುವ ಸಂಭವ
- ರೈತರಿಗೆ ಸಾಮಾಜಿಕ ಭದ್ರತೆ ಕೊರತೆ ಉಂಟಾಗಬಹುದು